# ಉಳುಕು

ನಡುನೀರಿನಲ್ಲಿ ಕೈ ಬಿಟ್ಟು ತಟ್ಟನೇ
ಯಾಕೆ ಹೋದಿ ಅಂದು
ಅಚಾನಕ್ಕಾಗಿ ನೀರದಾರಿಯ ನಡುವೆ
ಹಾಗೆ ಮಾಡಬೇಕೆ?
ನಿನಗೆ ವೈರಿಯಾಗಿರಲಿಲ್ಲ, ನಿನ್ನನ್ನೆ ನಂಬಿದ್ದೆ,
ನಿನಗಾತು ನಿಂತಿದ್ದೆ
ಈಸು ತಿಳಿದಿರಲಿಲ್ಲ
ನನ್ನ ಮೂರ್ಖ ಮುಗ್ಧತೆ ನಿನಗೆ ತಿಳಿದಿತ್ತು
ಅರಿವಿತ್ತು ಎಲ್ಲವೂ
ಎಲ್ಲಿ ಹೋದೆಯೋ ಯಾಕೆ ಹೋದೆಯೋ
ತಿಳಿಯಲೇ ಇಲ್ಲ ಇಷ್ಟು ವರ್ಷ,
ನಿನಗಿತ್ತು ಎಂಥ ಹರ್ಷ?

ಈಗ ಬಂದಿದ್ದೀ ಹುಡುಕುತ್ತ
ಹುಡುಹುಡುಕುತ್ತ ಮತ್ತೆ ನಿನ್ನನ್ನೇ
ಅಲ್ಲ ನನ್ನನ್ನು. ಎಲ್ಲಿ ಸಿಗುತ್ತೀ
ನಿನಗೆ ನೀನೇ ಹೊರವ್ಯಕ್ತಿ ಈಗ?
ಯಾರ ನೆರವಿಗೆ ಯಾರು
ಈ ದಡದಿ ಈ ಜಲದಿ ಈ ನೆಲದಿ
ಕೈ ಕೊಟ್ಟು ಹೋಗಿದ್ದಾರೆ ಬಹುಜನರು
ನೋಡುತ್ತಿರುವೆ ಮೌನ
ನನ್ನ ಭಾಗ್ಯಕ್ಕೆ ನಾನೆ ಕನಲುತ್ತಿರುವೆ
ನೀನು ನೀಲಿಮ ಗಹನ ಗಂಭೀರ
ದೂರದ ಗಗನ,
ನಾನು ಮಿನುಗುವ ಸರಳ ವಾಗರ್ಥ
ತೀರದ ಕವನ
ಈ ನಡುವೆ ಜೀವನವು
ಅರ್ಥಕ್ಕೆ ಸಿಗದ ಆಕಾರವಿರದ ವಿಹಗ.

**● ಸಿದ್ಧಲಿಂಗ ಪಟ್ಟಣಶೆಟ್ಟಿ**

ಕಲೆ: ಡಿ.ಕೆ. ರಮೇಶ್

